Reg No M. 1299 3ri 26—9—52

36 ನೇ ವರ್ಷ — 36 th Year

ಸತ್ಯವಾದಿ
SATYAVADI

ಬಿಡಿಪ್ರತಿ 3 ಪೈ] ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಾಯರು

ವಸ್ತುಪ್ರದರ್ಶನ ಸಮಿತಿಗೆ ಪುರಸಭೆಯ ಪತಿಭಟನೆ

ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಮೈಸೂರು ಪೌರಸಭೆಯ ಸಾಧಾರಣ ಅಧಿವೇಶನ ನಿನ್ನೆ ಸೇರಿತ್ತು. ದಸರ ವಸ್ತುಪ್ರದರ್ಶನದವರು ಪೌರಸಭೆಯ ಸಹಾಯ ಪಡೆದೂ, ಆಹ್ವಾನಪತ್ರ ಕೊಡುವ ವಿಷಯದಲ್ಲಿ, ಕೃತಜ್ಞತೆ ಸಲ್ಲಿಸದಿರುವ ಬಗ್ಗೆ ಈ ಅನಾದರ ಸರಿಯಲ್ಲವೆಂದು ಡಾ|| ಬಿ. ಜಿ. ದಾಸ್ ಮತ್ತು ಶ್ರೀ ಟಿ. ವೆಂಕಟೇಶಯ್ಯನವರು ತಿಳಿಸಿದರು. ಅಧ್ಯಕ್ಷರು ಉತ್ತರವನ್ನೀಯುತ್ತಾ, ಪ್ರತಿಭಟನೆ ಸೂಚನೆ ಮಾಡೋಣ ಎಂದರು.

ಮೈಸೂರಿನಲ್ಲಿ ಹಾಲಿಗೆ ತುಂಬಾ ಅಭಾವವಾಗಿದೆ. ದಸರೆ ಮುಗಿಯುವವರಿಗಾದರೂ ಹೋಟೆಲಿಗೆ ಹಾಲಿನಪುಡಿ ಸರಬರಾಜು ಮಾಡಿ ಕುದುರೆ ಪಂದ್ಯವನ್ನು ನಿಲ್ಲಿಸಿ. ಪಂಸ್ಥೆಗಳಿಂದ ಬಂದವರಿಗೆ ಪಡಿತರ ಒದಗಿಸಿ ಎಂದು ಡಾ|| ಬಿ. ಜಿ. ದಾಸರು ತಿಳಿಸಿದರು ಹಾಲುಪುಡಿ ಒದಗಿಸುವದಕ್ಕೆ ತೊಂದರೆಯಾಗುತ್ತದೆ. ಉಳಿದೆಂಡು ವಿಷಯ ನಮಗೆ ಸಂಬಂಧಪಟ್ಟದಲ್ಲ ಎಂದರು.

ಜಪಾನದಲ್ಲಿನ ಹೈನ

ಜಪಾನದಲ್ಲಿಯ 60 ಲಕ್ಷ ಒಕ್ಕಲಿಗರಲ್ಲಿ 2 ಲಕ್ಷ ಮಾತ್ರ, ಹಿಂಡುವ ಆಕಳುಗಳಿವೆ ಈ ವ್ಯವಸಾಯವು ಅಲ್ಲಿ ದಿನದಿನಕ್ಕೆ ಬೆಳೆಯುತ್ತಲಿದೆ ಮತ್ತು ಜನರು ಮಾಂಸ ಮತ್ತು ಹಾಲು ಮೊಸರುಗಳನ್ನು ಹೆಚ್ಚಾಗಿ ಸೇವಿಸಹತ್ತಿದ್ದರಿಂದ ಆ ದೇಶದ ಆಹಾರ ಸಮಸ್ಯೆಗೆ ತುಂಬ ಸಹಾಯವಾಗುತ್ತಿದೆ ಎಂದು ಅಲ್ಲಿಯ ರಾಜಕಾರಣಿಗಳು ಅನ್ನುತ್ತಿದ್ದಾರೆ.

ಆರು ವರ್ಷದ ಹುಡುಗನ ಬುದ್ಧಿ ಚಮತ್ಕಾರ

ಜಬ್ಬಲಪುರದಿಂದ ಹಂದಿನೊಟು ಮೈಸು ದೂರದಲ್ಲಿರುವ ಕಲದೇಹಿ ಎಂಬ ಗ್ರಾಮದಲ್ಲಿರುವ ಕನ್ನಯ್ಯಲಾಲ ಚೌಬೇ ಎಂಬ ಪೂಜಾರಿಯ 6 ವರ್ಷದ ಮಗ ದಾಮೋದರ ಪ್ರಸಾದವು ಋಗ್ವೇದ, ಗೀತಾ, ಭರ್ತೃಹರಿ ಶತಕ, ರಾಮಾಯಣ, ಭೋಜಪ್ರಬಂಧ ಮೊದಲಾದ ಸಂಸ್ಕೃತ ಗ್ರಂಥಗಳಲ್ಲಿಯ ಯಾವುದೇ ಶ್ಲೋಕವನ್ನು ಅನಾಯಾಸವಾಗಿ ಹೇಳುತ್ತಾನೆ.

ಪತ್ರಿಕೋದ್ಯೋಗಿಗಳಿಗೆ ಶಿಕ್ಷಣ-

ದಕ್ಷಿಣ ಜಿಲ್ಲ ಕನ್ನಡ ಪತ್ರಿಕೋದ್ಯೋಗಿ ಸಂಘದ ಆಶ್ರಯದಲ್ಲಿ 3 ತಿಂಗಳ ಕಾಲ ಪತ್ರಿಕೋದ್ಯಮದ ವರ್ಗವನ್ನು ಪ್ರಯೋಗಾರ್ಥವಾಗಿ ಪ್ರಾರಂಭ ಮಾಡಲು ತೀರ್ಮಾನಿಸಲಾಗಿದೆಯೆಂದು ಮಂಗಳೂರು ವಾರ್ತೆ.

ಕಿರೀಟಗಳಿಗೆ ಬೇಡಿಕೆಯಿಲ್ಲ

ಲಂಡನ್ನಿನಲ್ಲಿ ರಾಜರ ಕಿರೀಟಗಳನ್ನು ರಚಿಸುವ ಒಂದು ಕಂಪನಿಯಿದೆ. ಅದು ಕಳೆದ 2 ನೂರು ವರ್ಷಗಳಿಂದ ಇದೇ ಕೆಲಸವನ್ನು ಮಾಡುತ್ತಿದೆ. ಆದರೆ ಇತ್ತಕಡೆಗೆ ಕಿರೀಟಗಳಿಗೆ ಬೇಡಿಕೆಯು ಕಡಿಮೆಯಾದುದರಿಂದ ಅದು ಆ ವ್ಯವಸಾಯವನ್ನು ನಿಲ್ಲಿಸಲು ಆಲೋಚಿಸಿದೆ.

ಕಮ್ಯೂನಿಸ್ಟಾಗ್ತಾರೆ

ಶ್ರೀಮತಿ ಅರುಣ ಆಸಫಾಲಿ ಹೇಳಿಕೆಯಿತ್ತು ಸೋಷಲಿಸ್ಟ್ ತೀವ್ರವಾದಿಗಳು ಕಮ್ಯೂನಿಸ್ಟ್ ಪಾರ್ಟಿಗೆ ಸೇರುವದಾಗಿ ತಿಳಿಸಿರುವರೆಂದು ಬೊಂಬಾಯಿವರದಿ

ಶಿಕ್ಷಣ ಸಮಿತಿ ಕಾರ್ಯಕಲಾಪಗಳ ಪ್ರಾರಂಭೋತ್ಸವ

ಎಂಟು ಮಂದಿ ಕನ್ನಡ ಚಳುವಳಿಗಾರರ ಬಂಧನ

ಮೈಸೂರು : ಶಿಕ್ಷಣ ಪುನರ್ವ್ಯವಸ್ಥೆ ಸಮಿತಿಯ ಕೆಲಸಕಾರ್ಯಗಳ ಉದ್ಘಾಟನೋತ್ಸವವನ್ನು ಕ್ಯಾಫರ್ಡ್ ಭವನದಲ್ಲಿ ಮೈಸೂರು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ಸುತ್ತಾ : ಶಿಕ್ಷಣ ಪದ್ಧತಿ ಉದ್ದೇಶ ಮತ್ತು ಯೋಜನಾಪೂರ್ವಕವಿಂಬೇಕು. ಶಿಕ್ಷಣ ದೊರಕಿದ ನಂತರ ಅದರಿಂದ ಅವರಿಗೂ ದೇಶಕ್ಕೂ ನಾನಾ ಮೂಲೆಗಳಲ್ಲಿ ಕೆಲಸ ಮಾಡಲು ಆಗುವಂತಿರಲಿ. ದಾರಿದ್ರ್ಯ, ರೋಗ ಮತ್ತು ಅಜ್ಞಾನ ಇವುಗಳಿಂದ ಈ ದೇಶವನ್ನು ಬಿಡಿಸುವದೆ ಗುರಿಯಾಗಿದೆ. ಸುಭಿಕ್ಷ ಹಾಗೂ ಘನ ತರ ದೇಶಕಟ್ಟುವದೇ ನಮ್ಮ ಆದರ್ಶವಿರಬೇಕು. ಗುರಿ ಮುಟ್ಟುವದಕ್ಕೆ ನಮ್ಮ ಯುವಕರಿಗೆ ಶಿಕ್ಷಣ ಹಾಗೂ ಆದರ್ಶ ತೋರಿಸಬೇಕು — ಎಂದರು.

ಸಮಾರಂಭಕ್ಕೆ ಯಶಸ್ಸು ಕೋರಿ ಪಂ|| ನೆಹರು ಮುಂತಾದವರಿಂದ ಸಂದೇಶಗಳು ಬಂದಿದ್ದವು.

ಸಂದೇಶಗಳನ್ನು ಶ್ರೀ ಜೆ ಬಿ. ಮಲ್ಲರಾಧ್ಯರು ಪಠಿಸಿದರು. ಶಿಕ್ಷಣ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಸ್ವಾಗತಿಸಿದರು.

ಮೈಸೂರು ಶ್ರೀಮನ್ಮಹಾರಾಜರವರು ಕಳಿಸಿದ ದಿವ್ಯ ಸಂದೇಶದಲ್ಲಿ ಹೀಗೆ ತಿಳಿಸಿದ್ದಾರೆ —

ನಮ್ಮ ರಾಷ್ಟ್ರದ ಹಿರಿಯವರು ಸಮಸ್ಯೆಗಳಲ್ಲಿ ವಿದ್ಯಾಭ್ಯಾಸದ ವಿಷಯ ಅತಿ ಪ್ರಾಮುಖ್ಯವಾದುದು. ರಾಷ್ಟ್ರಹಿತಕ್ಕೆ ವಿರುದ್ಧವಾಗಿರುವ ಈಗಿನ ವಿದ್ಯಾಭ್ಯಾಸ ಕ್ರಮವು ನಮ್ಮ ಅನೇಕ ಕಷ್ಟಗಳಿಗೆ ಕಾರಣವಾಗಿದೆ. ವಿದ್ಯಾಭ್ಯಾಸದ ಉದ್ದೇಶ, ಕ್ರಮ, ವ್ಯವಸ್ಥೆ — ಇವುಗಳನ್ನು ಪರೀಕ್ಷಿಸಿ ಸದ್ಯದ ಪರಿಸ್ಥಿತಿಗಳಿಗೆ ಅನ್ವಯಿಸುವಂತೆ ರೂಪುಗೊಳಿಸುವದು ಎಚ್ಚೆತ್ತ ಭಾರತದಲ್ಲಿ ಅತ್ಯಾವಶ್ಯಕವಾದ ಕಾರ್ಯವಾಗಿದೆ.

ಇಂದು ಸರಸ್ವತೀ ಪೂಜೆಯ ಶುಭ ಸನ್ನಿವೇಶದಲ್ಲಿ ಪ್ರಾರಂಭವಾಗಲಿರುವ ಸುಧಾರಣಾ ಸಮಿತಿಗೆ ನಮ್ಮ ಹೃತ್ಪೂರ್ವಕವಾದ ಶುಭಾಶಯಗಳು. ಭಗವದನುಗ್ರಹದಿಂದ ಸಮಿತಿಯ ಕಾರ್ಯಕಲಾಪಗಳು ಸಂಪೂರ್ಣ ಜಯಪ್ರದವಾಗಿ ಪರಿಣಮಿಸಲೆಂದು ಹಾರೈಸುತ್ತೇವೆ.

ಮೈಸೂರು : ಈ ಬೆಳಿಗ್ಗೆ ಕ್ಯಾಫರ್ಡ ಮಂದಿರದ ಮಹಡಿಯ ಮೇಲೆ ಶ್ರೀಗಳವರಾದ ಟಿ. ಪಿ. ಶ್ರೀನಿವಾಸರಾವ್, ಕೆ. ಬಿ. ಶಿವಯ್ಯನವಕನ್ನೂ, ಕಳಗಡೆ ಶ್ರೀಗಳಾದ ಬಿ ಶ್ರೀಕಂಠಪ್ಪ, ಕೆ ಪಿ. ಶಾಂತಮೂರ್ತಿ, ಶಿವರುದ್ರಯ್ಯ, ಹೊಡ್ಡೇಗೌಡ, ಲಿಂಗಯ್ಯ, ಸುಬ್ರಹ್ಮಣ್ಯ ಎಂಬವರನ್ನು ಪೋಲೀಸರು ಬಂಧಿಸಿ ವ್ಯಾನಿನಲ್ಲಿ ಸೆಂಟ್ರಲ್ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋದರು

ಈ ಬೆಳಿಗ್ಗೆ ಕ್ಯಾಫರ್ಡ ಭವನದಲ್ಲಿ ಶಿಕ್ಷಣ ಸಮಿತಿಯ ಉದ್ಘಾಟನೆ ಕಾರ್ಯಕಲಾಪಗಳು ಪ್ರಾರಂಭವಾಗುವ ಮುನ್ನ ಕನ್ನಡ ಶಿಕ್ಷಣ ಮಾಧ್ಯಮವಾಗಲಿ, ಪ್ರಥಮ ಭಾಷೆಯಾಗಲಿ ಎಂಬ ಕರಪತ್ರವನ್ನು ಕೆಲ ವಿದ್ಯಾರ್ಥಿಗಳು ಹಂಚುತ್ತಿದ್ದರು.

ಶ್ರೀ ಜಿ. ಬಿ. ಮಲ್ಲಾರಾಧ್ಯರು ಪ್ರಭುಗಳ ಸಂದೇಶವನ್ನು ಇಂಗ್ಲೀಷಿನಲ್ಲಿ ಪಠಿಸಲಾರಂಭಿಸಿದಾಗ, ಉಪ್ಪರಿಗೆಯ ಒಂದು ಮೂಲೆಯಿಂದ ಕನ್ನಡದಲ್ಲಿ ಕಾರ್ಯಕಲಾಪ ನಡೆಯಲಿ, ಕನ್ನಡದಲ್ಲಿ ಓದಿರಿ ಎಂದು ಬೊಬ್ಬೆ ಮುಂದುವರಿಯುತ್ತಲಿತ್ತು. ಶ್ರೀ ಮಲ್ಲಾರಾಧ್ಯರು, ವಿಲ್ ಯು ಕೀಪ್ ಕ್ವಯಟ್ ? ಯು ವಿಲ್ ಸಫರ್ ಎಂದು ಹೇಳುತ್ತಿದ್ದಾಗ್ಯೂ ಕನ್ನಡದ ಕೂಗು ನಿಲ್ಲಲಿಲ್ಲ.

ಶಿಕ್ಷಣ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಸ್ವಾಗತ ಭಾಷಣವನ್ನು ಇಂಗ್ಲೀಷಿನಲ್ಲಿ ಪ್ರಾರಂಭಿಸಿದಾಗ ಮತ್ತೆ ಕನ್ನಡದಲ್ಲಿ ಓದಿ ಎಂದು ಬೊಬ್ಬೆ ಎದ್ದಿತು. ದಿಸ್ ಈಸ್ ಎ ಮ್ಯಾಟರ್ ಆಫ್ ಆಲ್ ಇಂಡಿಯಾ ಇಂಟೆರೆಸ್ಟ್ — ಬೀ ಪೇಷಂಟ್ ಎನ್ನುತ್ತ ಹೇಳಿದರು ಕನ್ನಡ ಕೂಗು ನಡೆಯುತ್ತಿರುವಂತೆಯೇ ಅವರು ಭಾಷಣ ಓದಿ ಮುಗಿಸಿದರು.

ಮುಖ್ಯ ಮಂತ್ರಿಗಳು ಅಧ್ಯಕ್ಷ ಭಾಷಣ ಓದುತ್ತಿರುವಾಗಲೇ ಕನ್ನಡದಲ್ಲಿ ಓದಿ ಎಂದು ಮತ್ತೆ ಕೂಗೆದ್ದಿತು ಕಾರ್ಯಕಲಾಪಗಳೆಲ್ಲ ಇಂಗ್ಲೀಷಿನಲ್ಲಿ ನಿರ್ವಾಟಾಗಿ ಹೋಗಿದೆ ದಯವಿಟ್ಟು ಸುಮ್ಮನಿರಿ ಎಂದರು. ಆದಾಗ್ಯೂ ಮತ್ತೆ ಮತ್ತೆ ಬೊಬ್ಬೆ ಬರುತ್ತಿತ್ತು. ಶ್ರೀ ಶ್ರೀನಿವಾಸರಾಯರ ಬಂಧನವಾದನಂತರ ಶ್ರೀಗಳಾದ ಶ್ರೀಕಂಠಪ್ಪ, ಶಾಂತಮೂರ್ತಿ ಸಭಾ ಮಂದಿರದೊಳಕ್ಕೆ ಪ್ರವೇಶಿಸಿ, ವಿದ್ಯಾರ್ಥಿಗಳನ್ನು ಬಿಡಿರಿ ಎಂದು ಕೂಗಿದರು. ಭಾಷಣ ಪಠಿಸುತ್ತಿದ್ದ ಮುಖ್ಯ ಸಚಿವರು ಅವರನ್ನು ಹೊರಗೆ ಕಳಿಸಿ ಎಂದರು.

ಭವನದ ಹೊರಗಡೆ ಹನುಮಂತಯ್ಯನವರಿಗೆ ವರ್ತನೆಗೆ ಧಿಕ್ಕಾರ ಎಂಬ ಕೂಗು

ಗೆದ್ದಿತು ಒಳಗಡೆ ಕನ್ನಡ ಚಳುವಳಿ ಗಾತುರ ಷೇಂ – ಅನಿವಾರ್ಯ ಎಂದು ಕರೆಯಹತ್ತಿದರು.

ಮುಖ್ಯ ಮಂತ್ರಿಯವರು ವಿದ್ಯೆಗೆ ಅಧಿದೇವತೆ ಸರಸ್ವತಿ ಎಂದು ನುಡಿಯುತ್ತಿದ್ದಾಗ ಮಹಡಿಯ ಮುತ್ತೊಲದು ಭಾಗದಲ್ಲಿ ಓವರು : ಸರಸ್ವತಿಗೆ ಹಾರವೇ ಇಲ್ಲ ಎಂದು ಪದೇ ಪದೇ ಕೂಗಿದರು ಯಾರವರು ಕೂಗಿದವರು ಎಂದು ಅಧ್ಯಕ್ಷರು ಕೇಳಲು ನಾನು ಎಂದು ಅವರ್ಮ ಗೋಚರವಾದರು ಟೇಕ್ ದ್ಯೌ ಹಿಸ್ ಸೇಂ ಅಂಡ್ ಅಡ್ರೆಸ್ ಎಂದು ಮುಖ್ಯ ಮಂತ್ರಿಗಳು ತಿಳಿಸಿದರು

ಸಾಹುಕಾರ

ಮೊನ್ನೆ ರಾತ್ರಿ ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಥಿಯೇಟ್ರಿಕಲ್ ಕಂಪೆನಿಯವರು ' ಸಾಹುಕಾರ ' ಎಂಬ ನಾಟಕದಲ್ಲಿ ಮುಖ್ಯ ಪಾತ್ರ ಶ್ರೀ ಕೆ. ಡಿನ್.ವಂತಯ್ಯನವರ ಸ್ವಾಭಿಧ್ಯಕ್ಷತೆಯಲ್ಲಿ ಅಭಿನಯಿಸಿದರು. ಅದೇ ಸಂಜೆ ಶ್ರೀ ಚಾಮುಂಡೇಶ್ವರಿ ಭವನದಲ್ಲಿ ಏರ್ಪಾಟಾಗಿದ್ದ ಟೀ ಯಲ್ಲಿ ಗುಬ್ಬಿ ಸಂಸ್ಥೆ ಮಾಲೀಕರಾದ ನಾಟಕರತ್ನ ಶ್ರೀ ಬಿ. ಹೆಚ್. ವೀರಣ್ಣನವರು, ಸಂಸ್ಥೆಯ ವ್ಯವಸ್ಥಾಪಕ ಶ್ರೀ ಎಂ. ಸಿ. ಮಹದೇವಸ್ವಾಮಿಯವರು ಕನ್ನಡ ರಂಗಮಂಟಪ ಅಭಿವೃದ್ಧಿಗೆ ಸರ್ವರೂ ಸಹಕರಿಸಬೇಕೆಂದು ಪ್ರಾರ್ಥಿಸಿದರು.

ತಿಳುವಳಿಕೆ

ಚಿನ್ನ, ಬೆಳ್ಳಿ, ಇತರೆ ಗಿರವಿ ಮಾಲುಗಳು ಮೇಲೆ ಲೇವಾದೇವಿ ಮಾಡುವವರಿಗೆ

ಕಮ್ಮಿ ಬಡ್ಡಿಯಲ್ಲಿ ಹಣ ಎಲ್ಲಿ ಸಿಕ್ಕುತ್ತೆ ?

ಎಸ್ ಮಾಣಿಕ್‌ಚಂದ್ ಪುಕ್‌ರಾಜ್ ಮತ್ತು ಸನ್ಸ್, ಬ್ಯಾಂಕರ್ಸ್ ಮತ್ತು ಜೂಯಲರ್ಸ್, ಅಶೋಕರಸ್ತೆ, ದೊಡ್ಡಪೇಟೆ ಮೈಸೂರು ಬ್ಯಾಂಕು ಪಕ್ಕದಲ್ಲಿ, ದೊಡ್ಡ ಪೋಸ್ಟ್ ಆಫೀಸ್ ಸಮೀಪದಲ್ಲಿ, ಜಗ್ಗೂಲಾಲರವರ ಧರ್ಮಶಾಲೆ ಎದುರು ಅಂಗಡಿಯಲ್ಲಿಯೂ, ಇದೇ ಅಶೋಕಾ ರಸ್ತೆ ಆದಪ್ಪ ಚೌಕದಲ್ಲಿ 506 ನೇ ಕುಂಬಾರ ಹೆಂಚಿನ ನಮ್ಮ ಬ್ಯಾಂಚು ಅಂಗಡಿಯಲ್ಲಿಯೂ, ಮಿರ್ಜ ಆಸ್ಪತ್ರೆ ರಸ್ತೆ 1799 ನೇ ಮಹಡಿ ಮನೆಯಲ್ಲಿ ನಮ್ಮ ಬ್ರಾಂಚು ಆಂಗಡಿಯಲ್ಲಿಯೂ ಸಿಗುತ್ತೆ.

Edited, Printed and Published by Dharma Prachara Nirata M. S. Krishna Rao, at the Satyavadi Press, Chamrajpuram, Mysore.

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತವಾಣಿ

— ತಯಾರಕರು —

ಮೈಸೂರು ಇಂಡಸ್ಟ್ರಿಯಲ್
ಡ್ರಗ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್
ಮುಖ್ಯೇಶ್ವರಂ ಪೋಸ್ಟ್, ಬೆಂಗಳೂರು 3

ಗ್ರೈಪ್ ಸಿರಪ್

ಉಡ್‌ಲಾಂಡ್ ಯೆಲಸ್ಪಿ 2 ನೇ ವಾರ

— ದಸರಾ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ —

ರಾಮಜನ್ಮ Rama Janma

ಪಾತ್ರ— ಸಿರೂಪರಾಯ್, ತ್ರಿಲೋಕ ಕಪೂರ್, ರಾಜಸಿಂಗ್
ಹೃದಯಂಗಮವಾದ ಪೌರಾಣಿಕ ಹಿಂದಿ ಚಿತ್ರ
ಪ್ರತಿದಿನ 3 ಪ್ರದರ್ಶನಗಳು

ಅಪೂರ್ವ 26–9–52 ರಿಂದ

ಕಲ್ಯಾಣಂ ಪಣ್ಣಿಪಾರ್ [ತಮಿಳು]

ಪಾತ್ರ— ಎಸ್. ಟಿ ರಾಮರಾವ್, ಜಿ. ವರಲಕ್ಷ್ಮಿ, ಸಾವಿತ್ರಿ, [ದಿನ 3 ಆಟಗಳು

ರಣಜಿತ್ 26–9–52 ರಿಂದ

ನೀಲಂ ಪೆರಿ [ಹಿಂದಿ]

ಪಾತ್ರ— ಗೀತಾಬಾಲಿ, ಸಜ್ಜನ್, ಗೋಪ್ [ದಿನ 3 ಆಟಗಳು

ಸತ್ಯವಾದಿ ದಿನಪತ್ರಿಕೆ
.... ಚಂದಾ ....
ತಿಂಗಳಿಗೆ ಆರು ಆಣೆ

For Quality Printing
L. N. Press
Sivarampet, Mysore



Protect the Cow ಗೋ ಸಂರಕ್ಷಣೆ ಮಾಡಿ

Furniture for Hire & Sale
HOUSE OF
Honesty
Security
Service
for
Buyers and Sellers
that is

Ahmed Bros
Cabinet makers
& Commision Agents

New Curzon Park Road
Mysore.